ಕೊಡಿಯಲ್ಲಿ ಮಾತನಾಡಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಇದಕ್ಕೆ ತಾವು ಒಪ್ಪಿದಿರಿ. ಈ ಪುರಸಭೆಗಳಿಗೆ ಆಗಿಲ್ಲ, ಇಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮಾಡಬೇಕು ಎನ್ನುವುದು ಏನು ಇದೆ, ಅದನ್ನು ನಾವು ಮಾಡುತ್ತೇವೆ.

ಉಪಾಧ್ಯಕ್ಷರು :– ಆಯಿತು ಈಗ ಚಂದ್ರಣ್ಣನವರು.

SRI BASAVARAJA RAYA REDDY :- What he has done is correct.

ಶ್ರೀ ಆಂಜನಮೂರ್ತಿ :– ಸ್ವಲ್ಪ ಕಾನೂನಿನ ತೊಡಕು ಇದೆ ಅದಕ್ಕೆ ಇದರ ಬಗ್ಗೆ ಚರ್ಚೆ ಮಾಡಿ ಹೇಳುತ್ತೇನೆಂದೇ ನಾನು ಹೇಳಿದ್ದು.. ಶಂಖದಿಂದ ನೀರು ಬಂತಲ್ಲಾ ಈಗ ಬಿಡಿ..

ಉಪಾಧ್ಯಕ್ಷರು :– ಈಗ ಆಯಿತಲ್ಲಾ ಬಿಡಿ. ಅವರು ಮುಗಿಸಲಿ.

ಶ್ರೀ ಧರ್ಮಸಿಂಗ್ :– ಅಂಜನಮೂರ್ತಿಯವರು ಹಿರಿಯ ಸದಸ್ಯರಾಗಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– ನಮಗೆ ಸಮಾಧಾನವಾಗಿದ್ದರೆ, ನಿಮ್ಮನ್ನು ಶ್ಲಾಘಿಸುತ್ತೇವೆ. ಇಲ್ಲಿಗೆ ಅದನ್ನು ಸಾಕು ಮಾಡೋಣ.

ಶ್ರೀ ಧರ್ಮಸಿಂಗ್ :– ಅಂಜನಮೂರ್ತಿಯವರೂ ಕೂಡ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ, ಅವರೇನು ಹೇಳಿದ್ದಾರೆಂದರೆ, ಪಂಚಾಯತ್ ಲೈಕ್ಟ್‌ಗೆ ಇದು ಅನ್ವಯವಾಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಿ ಹೇಳುತ್ತೇನೆಂದು ಹೇಳಿದ್ದಾರೆ...ಆಯಿತು ಮಾಡುತ್ತೇವೆ...

(ಗೊಂದಲ)

ಉಪಾಧ್ಯಕ್ಷರು :– ಆಯಿತು ಸಂತೋಷವಾಗಿದೆ, ಮಾನ್ಯ ಅಂಜನಮೂರ್ತಿಯವರು ಕೂಡ ಅದನ್ನೇ ಹೇಳಿದ್ದು. ಪರಿಶೀಲಿಸಿ ನಾಳೆ ನಾಡಿದ್ದು ಹೇಳುತ್ತೇನೆಂದು ಅವರೂ ಕೂಡ ಹೇಳಿದ್ದರು.

ಶ್ರೀ ಆರಗ ಜ್ಞಾನೇಂದ್ರ :– ಆದಷ್ಟು ಶೀಘ್ರವಾಗಿ ಮಾಡಲಿ ಸಾರ್.

ಉಪಾಧ್ಯಕ್ಷರು :– ಈಗ ಆಯಿತು ಅವರು ಒಪ್ಪಿಕೊಂಡಿದ್ದಾರೆ, ಇದು ಮುಗಿಯಿತು.

ಶ್ರೀ ಆರಗ ಜ್ಞಾನೇಂದ್ರ :– ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತೇನೆ. ಆದಷ್ಟು ಬೇಗ ಇದನ್ನು ಕಾನ್‌ಸ್ಟಿಟ್ಯೂಟ್ ಮಾಡಿ, ನಗರ ಪ್ರದೇಶದಲ್ಲಿರುವ ಬಡವರಿಗೆ ಮನೆ ಮತ್ತು ನಿವೇಶನವನ್ನು ಹಂಚಲು ಅವಕಾಶ ಮಾಡಿಕೊಡಿ..

ಶ್ರೀ ಶ್ರೀರಾಮರೆಡ್ಡಿ :– ಸಾರ್, ನನ್ನದೊಂದು ಹೇಳಿಕೆ ಕೊಡಿಸಿ ಸಾರ್.

ಶ್ರೀ ಹೆಚ್. ಡಿ. ಬಸವರಾಜು :– ಇದನ್ನು ಕೂಡ 5 ನೇ ತಾರೀಖಿನೊಳಗೆ ಮಾಡಿ ಎಂಬುದು ನನ್ನ ಮನವಿ ಸಾರ್.

ಉಪಾಧ್ಯಕ್ಷರು :– ಈಗ ಬಾಲಕೃಷ್ಣರವರು, ಕೇಳಿ.

ಶ್ರೀ ಕೆ. ಎನ್. ರಾಜಣ್ಣ :– ಒಳ್ಳೆಯ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ನಾವು ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಆದರೆ ಒಂದು ಸಲಹೆ, ವಸತಿ ಸಚಿವರು ಏನು ಇದ್ದಾರೆ, ವಸತಿ ಸಚಿವರು ಎನ್ನುವ ನಾಮೆಂಕ್ಲೇಚರನ್ನು ವಸತಿ ಹೀನ ಸಚಿವರೆಂದು ಮಾಡಿದರೆ ಎಲ್ಲರಿಗೂ ಕೂಡ ಬಹಳ ಸಮಾಧಾನವಾಗುತ್ತದೆ, ಇದು ನನ್ನ ಸಲಹೆ.

ಉಪಾಧ್ಯಕ್ಷರು :– ಆಯಿತು ಇದು ಮುಗಿಯಿತು. ಬೇರೆ ಕೇಳಿ..

(ಈ) ವಿಷಯ :– ಬೆಂಗಳೂರು ನಗರ ಹಾಗೂ ಗ್ರಾಮಾಂತರ ರಸ್ತೆಗಳು ತುಂಬಾ ಹಾಳಾಗಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದರ ಬಗ್ಗೆ.

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) :– ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳೆಲ್ಲವೂ ಕೆಟ್ಟಿವೆ. ಯಾವುದೇ ಅನುದಾನದಡಿಯಲ್ಲಿ ಆ ರಸ್ತೆಗಳ ರಿಪೇರಿಯಾಗಲಿ ಅಥವಾ ಹೊಸದಾಗಿ ಡಾಂಬರೀಕರಣ ಮಡುವುದಾಗಲಿ ಇದರ ಬಗ್ಗೆ ಸರ್ಕಾರ ಗಮನಹರಿಸಲಿಲ್ಲ. ಈ ವಿಚಾರವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ..

ಶ್ರೀ ಎಂ. ಟಿ. ಬಿ. ನಾಗರಾಜ್ : ನಗರ ಹಾಗೂ ಗ್ರಾಮಾಂತರ ಎರಡು ಜಿಲ್ಲೆಯ ಬಗ್ಗೆ ಹೇಳಿ. ಎರಡು ಕ್ಷೇತ್ರಗಳಿಗೂ ಒಳಪಡುತ್ತದೆ.

ಡಾ: ಹೆಚ್. ಸಿ. ಮಹದೇವಪ್ಪ : ಆಯಿತು.

ಶ್ರೀ ಬಸವರಾಜ್ ರಾಯರೆಡ್ಡಿ : ರಾಜ್ಯದಲ್ಲಿ ಎಂದು ಹಾಕಿಕೊಂಡು ಹೇಳಿದರೆ ಒಳ್ಳೆಯದು.

ಡಾ: ಹೆಚ್. ಸಿ. ಮಹದೇವಪ್ಪ : 2002–03 ನೇ ಇಸ್ವಿಯಲ್ಲಿ ಸುಮಾರು 447.8 ಲಕ್ಷ ರೂ. ಕೊಟ್ಟಿದ್ದೇವೆ. 2003–04 ರಲ್ಲಿ 328.19 ಲಕ್ಷ ರೂ, 2004–05 ರಲ್ಲಿ 288.06 ಲಕ್ಷ ರೂ, ಕೊಟ್ಟಿದ್ದೇವೆ. ನಂತರ ಸುಮಾರು 173.1 ಲಕ್ಷ ರೂ. ನಬಾರ್ಡ್‌ನಲ್ಲಿ 2.52 ರೂ.ಯನ್ನು ಈ ಗ್ರಾಮೀಣ ಪ್ರದೇಶದ ರಸ್ತೆಗಳಿಗೆ ಕೊಡಲಿಕ್ಕೆ ಈ ಸಾರಿ ನಾವು ಅಂದಾಜು ಇಟ್ಟುಕೊಂಡಿದ್ದೇವೆ. ಆದರೆ ಎಲ್ಲಾ ರಸ್ತೆಗಳನ್ನು ಬೆಂಗಳೂರು ಉತ್ತರ ಹಾಗೂ ಬೆಂಗಳೂರು ದಕ್ಷಿಣ ಬೆಂಗಳೂರು ಪೂರ್ವ ಒಟ್ಟು 260 ಕಮಗಾರಿಗಳಿಗೆ 748 ಕಿ.ಮಿ.ಗೆ 14 ಕೋಟಿ ರೂಪಾಯಿ ಅಂದಾಜು ಮಾಡಿದ್ದಾರೆ. ನಾವು ಈ ಸಾರಿ ಎರಡೂವರೆ ಕೋಟಿ ರೂಪಾಯಿಗಳಲ್ಲಿ ನಬಾರ್ಡ್ ಮತ್ತು ಬೇರೆ ಬೇರೆ ಯೋಜನೆಗಳಲ್ಲಿ 2 ಕೋಟಿ 52 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹೆಚ್ಚಿನ, ಹಣಕಾಸು ನೆರವು ಲಭ್ಯವಾದಾಗ, ರಸ್ತೆಗಳ ದುರಸ್ಥಿ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಬೆಂಗಳೂರು ಸುತ್ತಮುತ್ತ ನಗರ ಬೆಳೆಯುತ್ತಿದೆ. ಹಲವಾರು ಕಡೆ ಲೇಔಟ್‌ಗಳು ಬರುತ್ತಿವೆ, ಬೆಂಗಳೂರು ನಗರ ಜಿಲ್ಲೆಯ ಹೋಬಳಿಗೆ ನನ್ನದು ಒಂದು ತಾವರೆಕೆರೆ ಹೋಬಳಿ ಬರುತ್ತದೆ, ಲೇಔಟ್‌ಗಳು ಆಗಿವೆ, ಫ್ಯಾಕ್ಟರಿಗಳು ಆಗಿವೆ, ಎಲ್ಲಾ ಬಂದು ವಾಹನಗಳ ಸಂಖ್ಯೆ ಜಾಸ್ತಿಯಾಗಿ ರಸ್ತೆಗಳು ತುಂಬಾ ಕೆಟ್ಟಿವೆ. ನಾವು ಕೇಳಿಕೊಳ್ಳುವುದು ಇಷ್ಟೆ, ಅವರೇನೂ ಯಾವ ಅನುದಾನವನ್ನು ಕೊಡುವುದು ಬೇಡ, ನಗರ ಜಿಲ್ಲೆಗೇನು ಸ್ಟ್ಯಾಂಪ್ ಡ್ಯೂಟಿ ಹಣ ಬರುತ್ತದೆ, ಆ ಹಣವನ್ನು ನಗರ ಜಿಲ್ಲೆ ವ್ಯಾಪ್ತಿಗೆ ಖರ್ಚು ಮಾಡುವುದಕ್ಕೆ ಅವಕಾಶವನ್ನು ದಯಮಾಡಿ ಮಾಡಿಕೊಡಬೇಕು, ಏಕೆಂದರೆ, ನಗರ ಜಿಲ್ಲೆಯಲ್ಲಿ ಬರುವ ಜಾಸ್ತಿ ಸ್ಟ್ಯಾಂಪ್ ಡ್ಯೂಟಿಯನ್ನು ತೆಗೆದುಕೊಂಡು ಹೋಗಿ ಇಡೀ ರಾಜ್ಯಕ್ಕೆ ಹಂಚತಕ್ಕಂಥ ವ್ಯವಸ್ಥೆಯನ್ನು ಹಿಂದೆ ಇದ್ದಂಥ ಸರ್ಕಾರ ಮಾಡಿದೆ. ಅದನ್ನು ಕ್ಯಾನಲ್ಸ್ ಮಾಡಿ ಕೊಟ್ಟರೂ ಸಾಕು. ಅಥವಾ ದಯಮಾಡಿ ಹೆಚ್ಚಿನ ಅನುದಾನವನ್ನು ಕೊಡಿ, ಬೇರೆ ಎಲ್ಲಾ ಕೊಟ್ಟಿದ್ದೇವೆ. ಹಳ್ಳಿ ಕಡೆ ಕೊಟ್ಟಿದ್ದೇವೆ, ಅಷ್ಟೇ ಇಲ್ಲಿ ಕೊಡುತ್ತೇವೆಂದರೆ ಪ್ರಯೋಜನವಾಗುವುದಿಲ್ಲ. ಇಲ್ಲಿ ವೆಹಿಕಲ್‌ಗಳ ಸಂಖ್ಯೆ ಜಾಸ್ತಿ ಇದೆ. ಬೆಂಗಳೂರು ಪಕ್ಕದಲ್ಲೇ ಇರುವುದರಿಂದ, ರಸ್ತೆಗಳು ತುಂಬಾ ಕೆಟ್ಟಿವೆ. ಅವರು ಕೊಡುವ ಹಣ ಏನೇನೂ ಸಾಲದು. ಗುಂಡಿಗಳನ್ನು ಮುಚ್ಚುವುದಕ್ಕೆ ಸಾಲದು. ದಯಮಾಡಿ, ಈ ಸ್ಟ್ಯಾಂಪ್ ಡ್ಯೂಟಿ ಹಣವನ್ನಾದರೂ

ಉಳಿಸಿ ಕೊಡಬೇಕು. ಅದನ್ನಾದರೂ ಸಚಿವರು ನಮಗೆ ಈ ಸದನದಲ್ಲಿ ತಿಳಿಸಬೇಕು. ವಿಶೇಷವಾದ ಅನುದಾನವನ್ನು ರಸ್ತೆಗಳ ಬಗ್ಗೆ ತರಿಸಿಕೊಂಡು ಎಲ್ಲವನ್ನೂ ಡಾಂಬರೀಕರಣ ಮಾಡಬೇಕಾಗುತ್ತದೆ. ಏಕೆಂದರೆ ಆ ರಸ್ತೆಗಳ ಮೂಲಕ ಕೆಲಸಕ್ಕೆ ಬರತಕ್ಕಂಥ ಜನಗಳಿಗೆ ತೊಂದರೆಯಾಗಿದೆ. ಬಿಟಿಎಸ್ ಬಸ್‌ಗಳು ಓಡಾಡುವುದಕ್ಕೆ ತೊಂದರೆಯಾಗಿದೆ, ಹೀಗಾಗಿ ಅವರು ಕೂಡ ಆ ರಸ್ತೆಯಲ್ಲಿ ಓಡಾಡುವುದು ಕಷ್ಟವೆಂದು ನಿಲ್ಲಿಸಿಬಿಟ್ಟಿದ್ದಾರೆ. ಆದುದರಿಂದ, ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಸರಿಯಾದಂಥ ಉತ್ತರ ಕೊಡಬೇಕೆಂದು ಕೋರುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ : ಗ್ರಾಮೀಣ ರಸ್ತೆಗಳ ದುರಸ್ಥಿಗೆ ಸರ್ಕಾರ ನಬಾರ್ಡ್, ಸಿಎಂಜಿವೈಎಸ್, ಪಿಎಂಜಿವೈಎಸ್, ಮೂಲಕ ದುರಸ್ಥಿ ಮಾಡತಕ್ಕಂಥ ಪ್ರಯತ್ನ ಮಾಡಿದರೂ ಸುಮಾರು ಒಂದು ಲಕ್ಷ ಹದಿನೈದು ಸಾವಿರ ಕಿ.ಮೀ. ಉದ್ದ ಇರುವ ಗ್ರಾಮೀಣ ರಸ್ತೆಗಳಿಗೆ, ಲಭ್ಯವಾಗಿರತಕ್ಕಂಥ ಹಣಕಾಸು ಏಕಕಾಲದಲ್ಲಿ ಎಲ್ಲಾ ರಸ್ತೆಗಳನ್ನು ದುರಸ್ಥಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದರೂ ವಾಹನ ಸಂಪರ್ಕಗಳಿಗೆ ತೊಂದರೆಯಾಗದ ರೀತಿಯಲ್ಲಿ ಈ ಸಾರಿ 2.25 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಸರಿಯಾದಂಥ ಉತ್ತರ ಕೊಡಬೇಕು, ಎಲ್ಲರಿಗೂ ಕೊಟ್ಟಿದ್ದೇವೆ ಅಂದರೆ ಏನೂ ಪ್ರಯೋಜನವಾಗುವುದಿಲ್ಲ.

ಡಾ: ಹೆಚ್. ಸಿ. ಮಹದೇವಪ್ಪ : ವಿಶೇಷ ಹಣ ಕೊಟ್ಟು ಇದನ್ನೆಲ್ಲಾ ದುರಸ್ಥಿ ಮಾಡಬೇಕೆಂದು ಕೇಳಿದ್ದಾರೆ, ಹಣಕಾಸಿನ ಇಲಾಖೆಯಲ್ಲಿ ನಾವು ಪ್ರಸ್ತಾವನೆಯನ್ನು ಮಂಡಿಸಿದ್ದೇವೆ. ಈ ಸಾರಿ ನಮಗೆ 200 ಕೋಟಿ ರೂಪಾಯಿಗಳನ್ನು ಗ್ರಾಮೀಣ ರಸ್ತೆಗಳಿಗೆ ಕೊಡಬೇಕೆಂದು ಮನವಿ ಮಾಡಿದ್ದೇವೆ. ಆ ಒಂದು ಹಣ ನಮಗೆ ಲಭ್ಯವಾದಾಗ ಈ ಒಂದು ಗ್ರಾಮೀಣ ರಸ್ತೆಗಳ ಸ್ಥಿತಿಗತಿಗಳ ಸುಧಾರಣೆಗೆ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸುತ್ತದೆಂದು ಹೇಳುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಸ್ಟ್ಯಾಂಪ್ ಡ್ಯೂಟಿ ಹಣಕೊಡಿಸಬೇಕು.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಾಲಕೃಷ್ಣ ಗೌಡರು ಹೇಳಿದ್ದು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಬೆಂಗಳೂರು ಸುತ್ತಮುತ್ತ ಆಗುವ ಅಭಿವೃದ್ಧಿಗೆ ಮೂಲಭೂತ ಸೌಲಭ್ಯಗಳ ರಾ–ಮೇಟಿರಿಯಲ್ ಎಲ್ಲಾ ಬರುವುದು ನಮ್ಮ ಸಬ್ ಅರ್ಬನ್ಸ್‌ನಿಂದ. ಆ ಸಬ್ ಅರ್ಬನ್ಸ್‌ನಿಂದ ರೆವಿನ್ಯೂ ರೀಸೋರ್ಸ್ ಇವರು ತೆಗೆದುಕೊಂಡುಬಿಡುತ್ತಾರೆ. ಆದರೆ, ಈವತ್ತು ಆ ರಸ್ತೆಗಳು, ಗುಲ್ಬರ್ಗ, ಬೀದರ್ ಹಿಂದುಳಿದಿದೆ ಎಂದರೆ ಅದಕ್ಕಿಂತ ಹೆಚ್ಚಾಗಿ ಆ ನೂರು ಪಟ್ಟು ಆ ಪ್ರದೇಶಗಳು ಹಿಂದುಳಿದ ಪ್ರದೇಶಗಳಾಗಿ ಉಳಿದಿವೆ. ಅದು ಮಿನಿಸ್ಟರ್ ಅಲೋಕೇಷನ್ ಸೆನ್ಸ್‌ನಲ್ಲಿ ಅರ್ಥ ಮಾಡಿಕೊಳ್ಳಬೇಕಾದಂಥ ವಿಚಾರ. ಅದಕ್ಕೆ ಪ್ರಸ್ತಾವನೆಗಳನ್ನು ನಿಮ್ಮ ಮುಂದೆ ಹತ್ತಾರು ಸಾರಿ ತಂದರೂ ಕೂಡ ನೀವು ಗಮನ ಕೊಟ್ಟಿಲ್ಲ. ವರ್ಲ್ಡ್ ಏರಿಯಾದಿಂದ ಬರುವಂಥ ಇನ್‌ವೆಸ್ಟರ್ಸ್ ಹಣ ಇಲ್ಲಿ ಹಾಕುತ್ತಿದ್ದಾರೆ. ಆ ಹಣದಿಂದ ಉತ್ಪಾದನೆಯಾಗಿ ಎಕನಾಮಿಕ್ ರೆವಲ್ಯೂಷನ್ ಆಗುತ್ತದೆ. ಆದರೆ ಅದರ ಲಾಭವನ್ನು ಪಡೆಯುತ್ತೀರಿ, ಟ್ಯಾಕ್ಸ್ ತೆಗೆದುಕೊಳ್ಳುತ್ತೀರಿ, ಎಲ್ಲಾ ಮಾಡಿಕೊಂಡು ನೀವು ಈ ಜಿಲ್ಲೆಯನ್ನು ನೆಗ್ಲೆಕ್ಟ್ ಮಾಡುತ್ತೀರಿ. ಅಲ್ಲಿ ಜನರ ಬದುಕು ಹೇಗೆ ಆಗಿದೆ ಎಂದು ನೋಡಬೇಕಾದರೆ ಯಾವುದಾದರೊಂದು ತಾಲ್ಲೂಕನ್ನು ಸ್ಯಾಂಪಲ್ ಆಗಿ ತೆಗೆದುಕೊಂಡು ಆ ಒಂದು ಹೋಬಳಿಗೆ ನೀವು ಹೋಗಿಬಿಟ್ಟು ಬನ್ನಿ ಆಗ ಅಲ್ಲಿನ ನಿಜವಾದ ಸ್ಥಿತಿ ನಿಮಗೆ ಅರ್ಥವಾಗುತ್ತದೆ. ಆಗ ಬೆಂಗಳೂರು ಸಬ್‌ಅರ್ಬನ್ ಎಷ್ಟರಮಟ್ಟಿಗೆ ಡೆವಲಪ್ ಆಗಿದೆ ಎಂಬುದು ನಿಮಗೆ ಗೊತ್ತಾಗುತ್ತದೆ. ಅಭಿವೃದ್ಧಿ ಕೆಲಸ ಆಗುವಂಥ ಸಂದರ್ಭದಲ್ಲಿ ಒಂದು ಪರ್ಟಿಕ್ಯುಲರ್ ಏರಿಯಾ

ಮಾತ್ರ ಇವತ್ತಿನ ದಿವಸ ಅಭಿವೃದ್ಧಿಯಾಗುತ್ತಿದೆಯಷ್ಟೆ. ಬೇರೆ ಎರಿಯಾಗಳಲ್ಲಿರತಕ್ಕಂಥ ರಸ್ತೆ, ಬ್ರಿಡ್ಜಸ್, ಕುಡಿಯುವ ನೀರಿನ ವ್ಯವಸ್ಥೆಗಳೆಲ್ಲಾ ಇವತ್ತಿನ ದಿವಸ ಬಹಳ ಅವ್ಯವಸ್ಥೆಯಾಗಿದೆ. ಆದ್ದರಿಂದ, ನಾನೂ ಕೂಡ ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಇತ್ತ ಕಡೆ ಗಮನ ಕೊಡಬೇಕು ಮತ್ತು ಇಲ್ಲಿನ ಇನ್ವೆಸ್ಟ್‌ಮೆಂಟ್‌ಗೆ ತಕ್ಕಂತೆ ಒಂದು ಸ್ಪೆಶಲ್ ಕನ್ಸಿಡರೇಷನ್‌ನ್ನು ತೋರಿಸಬೇಕು. ಇವತ್ತಿನದಿವಸ ಇದು ಉತ್ಪಾದನೆ ಮಾಡತಕ್ಕಂಥ ಜಾಗವಾಗಿದೆ. ಮತ್ತೆ ಇನ್ವೆಸ್ಟರ್ಸ್ ಇಲ್ಲಿಗೆ ಬಂದು ಮೂಲಭೂತ ಸೌಕರ್ಯಗಳನ್ನು ಕೇಳುವಂಥ ಜಾಗಗಳಾಗಿವೆ. ಆದರೆ, ಇಲ್ಲಿರತಕ್ಕಂಥ ರಸ್ತೆಗಳು ಸರಿಯಾಗಿಲ್ಲ ಮತ್ತು ಪವರ್ ಪ್ರಾಬ್ಲಮ್ ಇದೆ. ಹಾಗೆಯೇ ಇಲ್ಲಿಗೆ ಬೇಕಾಗಿರತಕ್ಕಂಥ ಮೂಲಭೂತ ಸೌಕರ್ಯಗಳಿಗೆ ಸರ್ಕಾರ ಮಂಜೂರಾತಿ ಕೂಡ ಕೊಟ್ಟಿಲ್ಲ ಮತ್ತು ಇದಕ್ಕೆ ಒಂದು ಬಿಡಿಕಾಸು ಕೂಡ ಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕೆಂದು ಸಾರ್ವಜನಿಕರ ಪರವಾಗಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ :– ಮಾನ್ಯ ಉಪಾಧ್ಯಕ್ಷರೆ, ಅವರು ವಿಶೇಷ ಅನುದಾನ ಇದಕ್ಕಾಗಿ ಕೊಡುವುದಕ್ಕೆ ಆಗುವುದಿಲ್ಲವೆಂದರೆ, ಇಲ್ಲಿ ಬರತಕ್ಕಂಥ ಸ್ಟ್ಯಾಂಪ್ ಡ್ಯೂಟಿ ಹಣವನ್ನು ಇಲ್ಲಿ ಖರ್ಚು ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಬೆಂಗಳೂರು ನಗರದಲ್ಲಿ ಇವತ್ತಿನದಿವಸ ಸಿಟಿ ಮುನಿಸಿಪಾಲಿಟಿ ಕಾರ್ಪೊರೇಷನ್‌ಗೆ ಯಾವರೀತಿಯಾಗಿ ಮಾಡಿಕೊಡುತ್ತಿದ್ದಾರೆಯೋ ಅದೇ ರೀತಿಯಲ್ಲಿ ನಗರ ಜಿಲ್ಲೆಗಳಿಂದ ಬರತಕ್ಕಂಥ ಸ್ಟ್ಯಾಂಪ್ ಡ್ಯೂಟಿ ಹಣವನ್ನು ಅಲ್ಲಿಯೇ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದಕ್ಕೆ ಮತ್ತೆ ಬೇರೇನೂ ವಿಶೇಷ ಅನುದಾನವನ್ನು ಅವರು ಕೊಡುವುದು ಬೇಡ. ದಯಮಾಡಿ ಈ ಎರಡರಲ್ಲಿ ಒಂದಕ್ಕೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಎಂ. ಟಿ. ಬಿ. ನಾಗರಾಜ್ (ಹೊಸಕೋಟೆ) :– ಮಾನ್ಯ ಉಪಾಧ್ಯಕ್ಷರೆ, ನನ್ನ ಸ್ನೇಹಿತರಾದ ಮಾನ್ಯ ಬಾಲಕೃಷ್ಣರವರು ಮತ್ತು ಮಾನ್ಯ ಎ. ಕೃಷ್ಣಪ್ಪನವರು ಈ ವಿಚಾರವನ್ನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದಾರೆ. ಬೆಂಗಳೂರು ಗ್ರಾಮಾಂತರಕ್ಕೆ ಬರತಕ್ಕಂಥ ಹೊಸಕೋಟೆ ಮತಕ್ಷೇತ್ರದ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಗೆ ಸೇರ್ಪಡೆಯಾದಂಥ ಎಂಟು ಗ್ರಾಮಪಂಚಾಯತ್‌ಗಳು ಬರತಕ್ಕಂಥದಾಗಿದ್ದು ಒಂದು ಲಕ್ಷ ಮತದಾರರು ಹಾಗೂ ಒಟ್ಟು ಎರಡು ಲಕ್ಷ ಜನಸಂಖ್ಯೆ ಇರತಕ್ಕ ಹೋಬಳಿಯಾಗಿದೆ. ಇವತ್ತಿನದಿವಸ ನಮ್ಮ ಕಡೆ ನೂರಾರು ಕಿ.ಮೀ. ರಸ್ತೆಗಳು ಜಿಲ್ಲಾಪಂಚಾಯತ್ ವ್ಯಾಪ್ತಿಯೊಳಗೆ ಬರುತ್ತವೆ. ಕೇವಲ 3–4 ರಸ್ತೆಗಳು ಮಾತ್ರ ಇವತ್ತಿನದಿವಸ ನಮ್ಮಲ್ಲಿ ರಾಜ್ಯ ಹೆದ್ದಾರಿಗೆ ಬರುತ್ತವೆ. ಆದ್ದರಿಂದ, ಈಗಾಗಲೇ ಇರತಕ್ಕಂಥ ಜಿಲ್ಲಾಪಂಚಾಯತ್ ರಸ್ತೆಗಳನ್ನು ರಾಜ್ಯ ಹೆದ್ದಾರಿ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಬೇಕಾಗಿರತಕ್ಕಂಥ ಕೆಲಸವನ್ನು ಇವತ್ತಿನ ದಿವಸ ಸರ್ಕಾರ ಮಾಡಬೇಕಾಗಿದೆ. ಮತ್ತೆ ಇವತ್ತಿನ ದಿವಸ ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹೊರರಾಜ್ಯಗಳಿಂದ ಬಂದು ಇಲ್ಲಿ ನಿರ್ಮಾಣ ಮಾಡುತ್ತಿರುವ ಖಾಸಗಿ ಬಡಾವಣೆಗಳು ಮತ್ತು ಅಂತರ್‌ರಾಷ್ಟ್ರಮಟ್ಟದ ಬೃಹತಾಕಾರವಾದ ಕಾರ್ಖಾನೆಗಳು ಬಹಳ ವೇಗವಾಗಿ ಇವತ್ತಿನದಿವಸ ಇಲ್ಲಿ ಬೆಳೆದಿವೆ. ಹಾಗೆಯೇ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ಸಾವಿರಾರು ಎಕರೆ ಭೂಮಿಗಳನ್ನು ಇವತ್ತಿನದಿವಸ ಖಾಸಗಿಯವರು ಅಭಿವೃದ್ಧಿ ಮಾಡಿದ್ದಾರೆ. ಇದರಿಂದ ಇವತ್ತಿನ ದಿವಸ ದೊಡ್ಡ ದೊಡ್ಡ ವಾಹನಗಳು ಅಂದರೆ 30 ರಿಂದ 40 ಟನ್ ಭಾರವನ್ನು ಹೊತ್ತುಕೊಂಡು ಓಡಾಡತಕ್ಕಂಥ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಹಾಗೆಯೇ ಜನಸ್ಫೋಟ ಜಾಸ್ತಿಯಾಗಿದೆ. ಇದರಿಂದ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಇವತ್ತಿನದಿವಸ ಎತ್ತಿನಗಾಡಿ

ಕೂಡ ರಸ್ತೆಯಲ್ಲಿ ಹೋಗುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಸರ್ಕಾರದ ವ್ಯಾಪ್ತಿಗೆ ಬರತಕ್ಕಂಥ ಒಂದೊಂದು ತಾಲ್ಲೂಕಿಗೆ 1 ಕೋಟಿ ರೂಪಾಯಿಗಳನ್ನಾದರೂ ತುರ್ತಾಗಿ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳ ಕಾಳಜಿ ನನಗೆ ಅರ್ಥವಾಗಿದೆ. ಈಗಾಗಲೇ ನಾನು ಹೇಳಿದ ಹಾಗೆ, ಸುಮಾರು 748 ಕಿ.ಮೀ ಉದ್ದದ ರಸ್ತೆಗೆ 14 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದು ಒಂದು ಅಂದಾಜು ಇಟ್ಟುಕೊಂಡಿದ್ದಾರೆ. ಆದರೆ, ಕೂಡಲೇ ಎಲ್ಲ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ 2 ಕೋಟಿ 52 ಲಕ್ಷ ರೂಪಾಯಿಗಳಷ್ಟು ಅಂದಾಜು ಇಟ್ಟುಕೊಂಡಿದ್ದೇವೆ. ಮತ್ತೆ ನಮಗೆ ಲಭ್ಯ ಆಗತಕ್ಕಂಥ ಹಣಕಾಸಿನ ಮಾಹಿತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಈ ರಸ್ತೆಗಳ ಪ್ರಾಮುಖ್ಯತೆಯನ್ನೂ ಗಮನದಲ್ಲಿಟ್ಟುಕೊಂಡು, ಅವುಗಳನ್ನು ದುರಸ್ಥಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅಗತ್ಯ ಬಿದ್ದರೆ ಮಾನ್ಯ ಸದಸ್ಯರುಗಳನ್ನು ಕರೆದು ಬೇರೆ ಬೇರೆ ಟ್ಯಾಕ್ಸ್‌ನಲ್ಲಿ ಕೊಡುವುದರ ಬಗ್ಗೆ ಚರ್ಚೆ ಮಾಡಿ ಇದರ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ನಾನು ಭರವಸೆ ಕೊಡುವುದಕ್ಕೆ ಬಯಸುತ್ತೇನೆ.

(ಉ) ವಿಷಯ :– ಭಾಲ್ಕಿ ತಾಲ್ಲೂಕಿನ ಗ್ರಾಮಾಂತರ ವಿಭಾಗದಲ್ಲಿ ಮಂಜೂರಾಗಿರುವ ವಿವಿಧ ವಸತಿ ಯೋಜನೆಗಳ ತಡೆಯುಂಟಾಗಿರುವುದರಿಂದ ಬಡ ಫಲಾನುಭವಿಗಳು ಗುಡಿಸಲುಗಳನ್ನು ಕಳೆದುಕೊಂಡಿರುವ ಬಗ್ಗೆ.

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :– ಮಾನ್ಯ ಉಪಾಧ್ಯಕ್ಷರೆ, ನಾನು ಕಳೆದ ಸಲ ಶಾಸಕನಾಗಿದ್ದ ಸಂದರ್ಭದಲ್ಲಿ ನನ್ನ ಭಾಲ್ಕಿ ಕ್ಷೇತ್ರದಲ್ಲಿ ಸುಮಾರು 2000 ಮನೆಗಳನ್ನು ನಾವು ಹಂಚಿದ್ದೆವು. ಇದರಲ್ಲಿ ವಿಶೇಷವಾಗಿ ಬಿ.ಜೆ.ಪಿ. ಶಾಸಕನಾಗಿರುವ ನಾನು ಅದರ ಅಧ್ಯಕ್ಷನಾಗಿದ್ದು ಉಳಿದ ನಾಲ್ಕು ಜನ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದರು. ಆ ಸಂದರ್ಭದಲ್ಲಿ ನಾವೆಲ್ಲರೂ ಕುಳಿತು ತೀರ್ಮಾನ ಮಾಡಿ ಈ ಮನೆಗಳನ್ನು ಹಂಚಿಕೆ ಮಾಡಿದ ನಂತರ ಇದರ ಬಗ್ಗೆ ಕೋರ್ಟ್‌ಗೆ ಹೋಗಿ ಒಂದು ವರ್ಷವಾಯಿತು. ಆಶ್ರಯ ಫಲಾನುಭವಿಗಳು ಈಗ ಅಲ್ಲಿದ್ದಂಥ ಮನೆಗಳಿಗೆ ಬೇಸ್‌ಮೆಂಟ್ ಮಾಡಿಕೊಂಡು ಕುಳಿತುಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈಗಾಗಲೇ ಒಂದು ವರ್ಷವಾಗಿದೆ. ಅವರು ಇದ್ದ ಮನೆಗಳ ಬಾಗಿಲುಗಳೆಲ್ಲವನ್ನೂ ತೆಗೆದು ಬಿಸಿಲು ಮತ್ತು ಮಳೆಯಲ್ಲಿ ಅವರು ಕುಳಿತುಕೊಂಡಿದ್ದಾರೆ. ಸರ್ಕಾರದ ವತಿಯಿಂದ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇವತ್ತಿನದಿವಸ ಹೈಕೋರ್ಟ್‌ಗೆ ಯಾರು ಅಟೆಂಡ್ ಆಗಬೇಕೆಂಬುದರ ಬಗ್ಗೆ ಇವರು ತೀರ್ಮಾನ ತೆಗೆದುಕೊಂಡಿಲ್ಲ. ಈ ರೀತಿಯಾದರೆ ಅಲ್ಲಿ ನಿರ್ಮಾಣ ಮಾಡಬೆಕಾಗಿರತಕ್ಕಂಥ ಸುಮಾರು 2 ಸಾವಿರ ಮನೆಗಳು ಇನ್ನು 10 ವರ್ಷಗಳಾದರೂ ಹಾಗೆಯೇ ಉಳಿಯುತ್ತವೆ. ಕಾರಣವೇನೆಂದರೆ, ಹೈಕೋರ್ಟ್‌ನಲ್ಲಿ ಯಾರೂ ಅಟೆಂಡ್ ಮಾಡದಿದ್ದರೆ ಇದು ಹಾಗೆಯೇ ಉಳಿಯುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಇಲ್ಲಿ ತಿಳಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಆಂಜನಮೂರ್ತಿ (ವಸತಿ ಸಚಿವರು) , :– ಮಾನ್ಯ ಉಪಾಧ್ಯಕ್ಷರೆ, ಭಾಲ್ಕಿ ತಾಲ್ಲೂಕಿನ ಗ್ರಾಮಾಂತರ ವಿಭಾಗದಲ್ಲಿ 2003–2004 ರಲ್ಲಿ ನೀಡಿದ ಗುರಿ, ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಈ ಕೆಳಗಿನಂತಿದೆ.